# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ., ಗ್ರಾ.ಕು.ನೀ&ನೈ ಉಪವಿಭಾಗ, ಚಿಕ್ಕಮಗಳೂರು (ಪ್ರಸ್ತುತ ನಿವೃತ್ತ) ಇವರ ವಿರುದ್ಧ ಶಿಸ್ತುಕ್ರಮ – ಅಂತಿಮ ಆದೇಶ

**ಓದಲಾಗಿದೆ:-**
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಚಿಕ್ಕಮಗಳೂರು ಇವರ ಪತ್ರ ಸಂ: ಜಿಪಂಚಿ/ಆ3/ಸಿಆರ್-09/ಗ್ರಾನೀಸ/2016-17, ದಿನಾಂಕ:24.05.2016
2. ಆಪಾದಿತರಿಗೆ ಕಾರಣ ಕೇಳುವ ನೋಟೀಸ್‌ನೊಂದಿಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಿದ ದಿನಾಂಕ: 05.11.2016
3. ಆಪಾದಿತರ ಅಧಿಕಾರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ:27.12.2016
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 103 ಇಎನ್‌ಕ್ಯೂ 2016, ದಿನಾಂಕ:04.11.2017
5. ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ: 1238 & 1239ಕ್ಕೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಮಂಡಳಿಯು ನೀಡಿರುವ ಆದೇಶ ದಿನಾಂಕ:19.08.2021

* * *

**<u>ಪ್ರಸ್ತಾವನೆ</u>:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ.(ಹಾಲಿ ನಿವೃತ್ತ)., ಇವರು ಗ್ರಾ.ಕು.ನೀ.&ನೈ. ಉಪವಿಭಾಗ, ಚಿಕ್ಕಮಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿಯವರು ಕುಡಿಯುವ ನೀರಿನ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಗೆ ಅಗತ್ಯ ಮಾಹಿತಿ ನೀಡದೆ ಇರುವುದು, ಅಲ್ಲದೆ, 2015-16ನೇ ಸಾಲಿನ ಟಾಸ್ಕ್ ಫೋರ್ಸ್ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ 44 ಕಾಮಗಾರಿಗಳಿಗೆ ಹಾಗೂ ಮೂಡಿಗೆರೆ ವಿಧಾನಸಭಾ ಕ್ಷೇತ್ರದ 29 ಕಾಮಗಾರಿಗಳಿಗೆ ನಿಗದಿಪಡಿಸಿರುವ ಒಟ್ಟು ಅನುದಾನದ ಪೈಕಿ ರೂ.46.80 ಲಕ್ಷಗಳ ಮೊತ್ತದ ಕಾಮಗಾರಿಗಳಲ್ಲಿ ಯಾವುದೇ ಪ್ರಗತಿ ಸಾಧಿಸದೆ ಅನುದಾನ ವ್ಯಪಗತವಾಗಲು ಕಾರಣರಾಗಿರುವ ಪ್ರಯುಕ್ತ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡುಉಬಂದ ಕಾರಣ ಸದರಿಯವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವನಿಮೇ) ನಿಯಮಗಳು 1957ರ ನಿಯಮ 11ರಂತೆ ಇಲಾಖಾ ವಿಚಾರಣೆಯನ್ನು ಜರುಗಿಸಲು ನಿರ್ಧರಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (2)ರಂತೆ ದೋಷಾರೋಪಣಾ ಪಟ್ಟಿಯೊಂದಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಸರ್ಕಾರದ ಕಾರಣ ಕೇಳುವ ನೋಟೀಸಿಗೆ ಪ್ರತಿಯಾಗಿ ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ. ರವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಮೇಲ್ಕಂಡ ಕ್ರಿಯಾಯೋಜನೆಗೆ ದಿನಾಂಕ:21.03.2016 & 02.04.2016ರಂದು ಆಡಳಿತಾತ್ಮಕ ಮಂಜೂರಾತಿ ನೀಡಿ 45 ದಿನಗಳೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ಷರತ್ತನ್ನು

ವಿಧಿಸಲಾಗಿರುತ್ತದೆ. ಈ ಮಧ್ಯೆ ತಾವು ಅನಾರೋಗ್ಯಕ್ಕೆ ತುತ್ತಾಗಿದ್ದು, ದಿನಾಂಕ:04.04.2016 ರಿಂದ 16.07.2016ರ ವರೆಗೆ ಒಟ್ಟು 87 ದಿನಗಳವರೆಗೆ ವೈದ್ಯಕೀಯ ರಜೆಯನ್ನು ಪಡೆದಿರುತ್ತೇನೆಂದು ತಿಳಿಸಿ, ತಮ್ಮ ವಿರುದ್ಧದ ಎಲ್ಲಾ ಆರೋಪಗಳನ್ನು ಅಲ್ಲಗೆಳೆಯುತ್ತಾ, ತಮ್ಮ ಮೇಲಿನ ಉದ್ದೇಶಿತ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿದ್ದರು. ಸದರಿಯವರು ಸಲ್ಲಿಸಿದ್ದ ವಿವರಣೆಯನ್ನು ಪರಿಗಣಿಸಿ ಮೇಲೆ ಓದಲಾದ ಕ್ರ.ಸಂ.(4)ರ ದಿನಾಂಕ:04.11.2017ರ ಆದೇಶದಲ್ಲಿ ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ. ಗ್ರಾ.ಕು.ನೀ&ನೈ ಉಪವಿಭಾಗ, ಚಿಕ್ಕಮಗಳೂರು ಇವರಿಗೆ ಕರ್ನಾಟಕ ನಾಗರಿಕ ಸೇವಾ (ವ.ನಿ.ಮೇ) ನಿಯಮಗಳು-1957ರ ನಿಯಮ 8(ii) ರಡಿ "ವಾಗ್ದಂಡನೆ" ವಿಧಿಸಿ ಆದೇಶಿಸಲಾಗಿರುತ್ತದೆ.

ಆದರೆ, ಆಪಾದಿತರಾದ ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ. ಗ್ರಾ.ಕು.ನೀ&ನೈ ಉಪವಿಭಾಗ, ಚಿಕ್ಕಮಗಳೂರು ಇವರು ಸರ್ಕಾರದ ದಿನಾಂಕ:04.11.2017ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ:1238 ಮತ್ತು 1239/2019ನ್ನು ದಾಖಲಿಸಿರುತ್ತಾರೆ. ಸದರಿ ಅರ್ಜಿಗಳ ವಿಚಾರಣೆ ನಡೆಸಿದ ಮಾನ್ಯ ನ್ಯಾಯಮಂಡಳಿಯು ದಿನಾಂಕ:09.08.2021ರಂದು ನೀಡಿರುವ ಆದೇಶದಲ್ಲಿ ದಿನಾಂಕ:04.11.2017ರ ಸರ್ಕಾರದ ದಂಡನಾದೇಶವನ್ನು ರದ್ದುಪಡಿಸಿ ಸದರಿ ಅಧಿಕಾರಿಯ ವಿರುದ್ಧ ಕ್ರಮಬದ್ಧ ವಿಚಾರಣೆ ಕೈಗೊಂಡು ಅಂತಿಮ ನಿರ್ಣಯ ಕೈಗೊಳ್ಳಲು ಆದೇಶಿಸಿರುತ್ತದೆ.

ಮಾನ್ಯ ಕೆ.ಎ.ಟಿ.,ಯ ಆದೇಶದ ಮೇರೆಗೆ ಪರಿಶೀಲಿಸಲಾಗಿದೆ. ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ., ಇವರು 2019 ನೇ ಸಾಲಿನಲ್ಲಿ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಆದುದರಿಂದ ಸದರಿ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಮಾನ್ಯ ನ್ಯಾಯಮಂಡಳಿಯು ಅವಕಾಶ ನೀಡಿದ್ದರೂ ಸಹ ಸದರಿಯವರು ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ವಿವರವಾದ ಇಲಾಖಾ ವಿಚಾರಣೆ ನಡೆಸಬಹುದಾದ ಯಾವುದೇ ಅಂಶಗಳು ಕಂಡುಬರುವುದಿಲ್ಲ. ಆದ್ದರಿಂದ ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ., ಗ್ರಾ.ಕು.ನೀ.&ನೈ. ಉಪವಿಭಾಗ, ಚಿಕ್ಕಮಗಳೂರು ಇವರ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ:-

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 183 ಜಿಪಅ 2021,</u>**
**<u>ಬೆಂಗಳೂರು ದಿನಾಂಕ : 24.02.2022</u>**

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:1238 ಮತ್ತು 1239/2019ಗಳಿಗೆ ಸಂಬಂಧಿಸಿದಂತೆ, ದಿನಾಂಕ :09.08.2021ರಂದು ನೀಡಿರುವ ಆದೇಶದ ಹಿನ್ನಲೆಯಲ್ಲಿ ಶ್ರೀ ಸಿ.ಜಿ.ಗುರುಮೂರ್ತಿ, ಹಿಂದಿನ ಸ.ಕಾ.ಇಂ., ಗ್ರಾ.ಕು.ನೀ.&ನೈ. ಉಪವಿಭಾಗ, ಚಿಕ್ಕಮಗಳೂರು (ಪ್ರಸ್ತುತ ನಿವೃತ್ತ) ಇವರ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಅನುಸಾರ
ಮತ್ತು ಅವರ ಹೆಸರಿನಲ್ಲಿ

24/2

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

24.02.2022

**<u>ಇವರಿಗೆ:</u>**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 &2) / (ಆಡಿಟ್).

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
3. ಆಯುಕ್ತರು, ಗ್ರಾ.ಕು.ನೀ ಮತ್ತು ನೈ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ), ಕೆ.ಆರ್.ಸರ್ಕಲ್, ಬೆಂಗಳೂರು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಎ ಮತ್ತು ಸಿ), ವಿಕಾಸಸೌಧ.
9. ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಇಲಾಖೆ, ಚಿಕ್ಕಮಗಳೂರು.
10. ಸಂಬಂಧಪಟ್ಟ ಅಧಿಕಾರಿಗೆ (ಮು.ಕಾ.ನಿ.ಅ., ಜಿ.ಪಂ., ಚಿಕ್ಕಮಗಳೂರು ರವರ ಮುಖಾಂತರ)

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
3. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲು.